# ನಿಮ್ಮೊಡನೆ

## ಪೋಲಾಗದಿರಲಿ ‘ಮತ’ ಎಂಬ ಅಸ್ತ್ರ

ಭೂಗಳ್ಳರು, ಅಪರಾಧ ಹಿನ್ನೆಲೆಯವರು ಚುನಾವಣೆ ನಿಲ್ಲಲು ನಿಷೇಧ ಹೇರಬೇಕೆಂದು ಚುನಾವಣಾ ಆಯೋಗ ಸರ್ಕಾರಕ್ಕೆ ಮಾಡಿದ ಶಿಫಾರಸು ನೆನೆಗುದಿಗೆ ಬಿದ್ದಿದ್ದರೂ, ಆಯೋಗ ತನಗಿರುವ ಅಧಿಕಾರದ ವ್ಯಾಪ್ತಿಯಲ್ಲಿ ಹಲವು ‘ಸುಧಾರಣೆ’ಗಳನ್ನು ಕಾಲಕಾಲಕ್ಕೆ ಜಾರಿಗೆ ತರುತ್ತಲೇ ಇದೆ. ಈ ಬಾರಿ ಆಯೋಗ ಕೈಗೊಂಡಿರುವ ಕ್ರಮಗಳು ಹೆಚ್ಚು ಪ್ರಾಯೋಗಿಕವಾಗಿವೆ.

ಮೇ 5ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಏ.10ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದೆ. ಚುನಾವಣಾ ಪ್ರಕ್ರಿಯೆ ಆರಂಭವಾಗುವುದಕ್ಕೆ ಒಂದು ದಿನ ಮುಂಚೆಯೇ ಏ.9ರಂದು 1.83ಕೋಟಿ ರೂ. ಅಕ್ರಮ ಹಣ ವಶಪಡಿಸಿಕೊಳ್ಳಲಾಗಿದೆ. 14ಸಾವಿರ ಲೀಟರ್ ಮದ್ಯ ಅಕ್ರಮ ಸಾಗಣೆ ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದು, 165 ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ಇದು ಚುನಾವಣಾ ಆಯೋಗ ನೀಡಿರುವ ಅಂಕಿ ಅಂಶ. ಕಾನೂನು ಕಣ್ಣಿಗೆ ಮಣ್ಣೆರಚಿ ಇದರ ನೂರು ಪಟ್ಟು ಹಣ ಹರಿದಾಡಿದೆ ಎಂದರೆ ಪ್ರಸಕ್ತ ಚುನಾವಣೆ ಹೇಗೆ ನಡೆಯಲಿದೆ ಎಂಬುದನ್ನು ಯಾರಾದರೂ ಊಹಿಸಬಹುದು.

ಒಬ್ಬ ಅಭ್ಯರ್ಥಿ 16ಲಕ್ಷ ರೂ.ಗಿಂತ ಅಧಿಕ ಹಣ ವೆಚ್ಚ ಮಾಡುವಂತಿಲ್ಲ ಎಂದು ಆಯೋಗ ನಿರ್ಬಂಧ ಹೇರಿದೆ. ಲಕ್ಷ ಈಗ ಯಾರ ಲಕ್ಷ್ಯಕ್ಕೂ ಇಲ್ಲ. ಏನಿದ್ದರೂ ಕೋಟಿ ಮಾತು. ‘ಲಕ್ಷಾಧಿಪತಿ’ಗಳು ಚುನಾವಣೆಗೆ ಸ್ಪರ್ಧಿಸುವ ದಿನಗಳು ದೂರವಾಗಿ, ‘ಕೋಟ್ಯಾಧಿಪತಿ’ಗಳು ಮಾತ್ರ ಚುನಾವಣೆಗೆ ಸ್ಪರ್ಧಿಸುವ ದಿನಗಳು ಎದುರಾಗಿರುವುದು ಪ್ರಜಾಪ್ರಭುತ್ವದ ವಿಪರ್ಯಾಸ. ಚುನಾವಣಾ ಆಯೋಗ ಚಾಪೆಯ ಕೆಳಗೆ ತೂರಿದರೆ, ರಂಗೋಲಿ ಕೆಳಗೆ ತೂರುವ ಕಲೆ ರಾಜಕೀಯ ಪಕ್ಷಗಳಿಗೆ ಚೆನ್ನಾಗಿ ತಿಳಿದಿದೆ. ಆದರೂ ಚುನಾವಣಾ ಆಯೋಗದ ಹದ್ದಿನ ಕಣ್ಣು ಬೇಕು. ಇದರಿಂದಾಗಿ ರಾಜಾರೋಷವಾಗಿ ನಡೆಯುವ ಅಕೃತ್ಯಗಳು ಕದ್ದುಮುಚ್ಚಿ ನಡೆಯುತ್ತವೆ! ಕೆಲ ಮಟ್ಟಿಗೆ ಕಡಿವಾಣವೂ ಬೀಳುತ್ತದೆ.

ಚುನಾವಣಾ ಆಯೋಗ ಈ ಬಾರಿ ಮತ್ತಷ್ಟು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದೆ. ಇದೊಂದು ಆಶಾದಾಯಕ ಬೆಳವಣಿಗೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವಂತೆ ಮೇಲಿಂದ ಮೇಲೆ ಪ್ರಕಟನೆ ನೀಡಿದೆ. ಇದರಿಂದ ಜಾಗೃತರಾದ ಮತದಾರರ ಸಂಖ್ಯೆ ಈ ಬಾರಿ ಹೆಚ್ಚಾಗಿದೆ. ಸುಮಾರು 15ಲಕ್ಷ ಮತದಾರರು ತಮ್ಮ ಹೆಸರನ್ನು ಸೇರಿಸಿಕೊಳ್ಳುವಂತೆ ಹೊಸದಾಗಿ ಅರ್ಜಿ ಸಲ್ಲಿಸಿದ್ದು, ಇದರಲ್ಲಿ 9ಲಕ್ಷ ಅಂಗೀಕಾರವೂ ಆಗಿದೆ. 2.67ಲಕ್ಷ ಮತದಾರರು ಹೆಸರು, ವಿಳಾಸ ಬದಲಾವಣೆ, ತಪ್ಪುಗಳ ತಿದ್ದುಪಡಿಗೆ ಅರ್ಜಿ ಸಲ್ಲಿಸಿದ್ದರೆ, ಅವರಲ್ಲಿ ಬಹುತೇಕ ಅರ್ಜಿಗಳನ್ನು ಇತ್ಯರ್ಥ ಮಾಡಲಾಗಿದೆ. ಮತದಾರರ ಮನೆಗಳಿಗೆ ಮತ ಚೀಟಿಗಳನ್ನು ತಲುಪಿಸುವ ವ್ಯವಸ್ಥೆಯನ್ನು ಈ ಬಾರಿ ಆಯೋಗವೇ ಮಾಡಲಿದೆ. ದೃಶ್ಯ ಮಾಲಿನ್ಯ ಉಂಟು ಮಾಡುವ ಕಟೌಟ್, ಬಂಟಿಂಗ್ಸ್, ಬ್ಯಾನರ್‌ಗೆ ನಿಷೇಧ ಹೇರಲಾಗಿದೆ. ಅಭ್ಯರ್ಥಿ ಎಷ್ಟು ಬೇಕಾದರೂ ಕರಪತ್ರ, ಭಿತ್ತಿಪತ್ರ ಮುದ್ರಿಸಿ ಕಸದ ರಾಶಿ ಸೃಷ್ಟಿ ಮಾಡುವ ಹಾಗಿಲ್ಲ. ಅಭ್ಯರ್ಥಿಗೆ ನಿಗದಿ ಮಾಡಿದ ಚುನಾವಣಾ ವೆಚ್ಚದ ಆಧಾರದಲ್ಲಿ ಇಂತಿಷ್ಟೇ ಎಂದು ಮಾತ್ರ ಮುದ್ರಿಸಬೇಕು. ಅಭ್ಯರ್ಥಿಯು ಜಿಲ್ಲಾಧಿಕಾರಿ ಕಚೇರಿಯಿಂದ ಪಡೆದ ಮಾಧ್ಯಮ ಪ್ರಮಾಣ ಪತ್ರ ಮತ್ತು ನಿರ್ವಹಣಾ ಸಮಿತಿಯಿಂದ ಅನುಮತಿ ಪತ್ರ ಒದಗಿಸಿದರೆ ಮಾತ್ರ ಕರಪತ್ರ ಮುದ್ರಿಸಿಕೊಡಬೇಕು. ಈ ನಿಯಮ ಉಲ್ಲಂಘಿಸಿದರೆ ಮುದ್ರಕ ಹಾಗೂ ಅಭ್ಯರ್ಥಿಗಳಿಬ್ಬರಿಗೂ ಆರು ತಿಂಗಳ ಜೈಲು ಶಿಕ್ಷೆ ಕಾದಿದೆ.

ಒಂದೇ ಕಡೆ ಮೂರು ವರ್ಷ ಬೀಡುಬಿಟ್ಟಿರುವ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಈಗಾಗಲೇ ಎತ್ತಂಗಡಿ ಮಾಡಲಾಗಿದೆ. ಚುನಾವಣಾಧಿಕಾರಿಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವಂತೆ ಅವರ ಕಾರ್ಯವೈಖರಿ ಮೇಲೆ ಆಯೋಗ ಹದ್ದಿನ ಕಣ್ಣಿಟ್ಟಿದೆ. ಜಿಲ್ಲೆಯ 24ವಿವಿಧ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಈ ರಹಸ್ಯ ಸ್ಥಳಗಳನ್ನು ನಿತ್ಯವೂ ಬದಲಾಯಿಸಲಾಗುವುದು. ಚುನಾವಣಾ ಅಕ್ರಮಗಳು ಕಂಡುಬಂದರೆ ಸಾರ್ವಜನಿಕರು ಸಹಾಯವಾಣಿ 1950 ನಂಬರ್‌ಗೆ ಕರೆ ಮಾಡಿ ದೂರು ದಾಖಲಿಸಬಹುದು.

ಭೂಗಳ್ಳರು, ಅಪರಾಧ ಹಿನ್ನೆಲೆಯವರು ಚುನಾವಣೆ ನಿಲ್ಲಲು ನಿಷೇಧ ಹೇರಬೇಕೆಂದು ಚುನಾವಣಾ ಆಯೋಗ ಸರ್ಕಾರಕ್ಕೆ ಮಾಡಿದ ಶಿಫಾರಸು ನೆನೆಗುದಿಗೆ ಬಿದ್ದಿದ್ದರೂ, ಆಯೋಗ ತನಗಿರುವ ಅಧಿಕಾರದ ವ್ಯಾಪ್ತಿಯಲ್ಲಿ ಹಲವು ‘ಸುಧಾರಣೆ’ಗಳನ್ನು ಕಾಲಕಾಲಕ್ಕೆ ಜಾರಿಗೆ ತರುತ್ತಲೇ ಇದೆ. ಈ ಬಾರಿ ಆಯೋಗ ಕೈಗೊಂಡಿರುವ ಕ್ರಮಗಳು ಹೆಚ್ಚು ಪ್ರಾಯೋಗಿಕವಾಗಿವೆ.

ಭ್ರಷ್ಟಾಚಾರ ಕಡಿವಾಣಕ್ಕೆ ಕೆಲವು ತಾಂತ್ರಿಕ ಕ್ರಮಗಳನ್ನು ಆಯೋಗ ಕೈಗೊಳ್ಳಬಹುದೇ ಹೊರತು, ಅದನ್ನು ತಡೆಯುವ ಶಕ್ತಿ ಇರುವುದು ಪ್ರಜ್ಞಾವಂತ ಮತದಾರನಿಗೆ ಮಾತ್ರ. ಮತದಾರರನ್ನು ಪ್ರಜ್ಞಾವಂತರಾಗಿಸುವ ಇದುವರೆಗಿನ ಜಾಗೃತಿ, ಚಳವಳಿಗಳು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಲಗಿಸಲು ಸಾಧ್ಯವಾಗದೇ ಇರಬಹುದು. ಆದರೆ ಪಕ್ಷಾಂತರಿಗಳು, ಸಮಯಸಾಧಕರು, ಸೋಮಾರಿ ಪ್ರತಿನಿಧಿಗಳನ್ನು ಸೋಲಿಸಿ ಮನೆಗೆ ಅಟ್ಟುವಲ್ಲಿ ತಕ್ಕಮಟ್ಟಿನ ಯಶಸ್ಸನ್ನು ಪಡೆದಿವೆ. ‘ಮತ’ ಎಂಬ ಪ್ರಬಲ ಅಸ್ತ್ರವೇ ಇದಕ್ಕೆ ಕಾರಣ. ‘ಮತ’ದಾನ ವ್ಯವಸ್ಥೆಯನ್ನು ಆಯೋಗ ಮುಕ್ತಗೊಳಿಸಿದೆ. ಅಸ್ತ್ರ ಬಳಸಿಕೊಳ್ಳುವುದು ಮತದಾರನಿಗೆ ಬಿಟ್ಟಿದೆ.

■ ಗುಡಿಹಳ್ಳಿ ನಾಗರಾಜ



ಈಶ್ವರ್